


ನಾಚಿಕೆ, ಮುಖಭಂಗವಾದಾಗ ಮುಖ ತಾನೇ ತಾನಾಗಿ ಕೆಳಬಾಗಿಬಿಡುವುದು. ತಪ್ಪು ಮಾಡಿದವರು ಮುಖ ಕೊಟ್ಟು ಮಾತನಾಡಲು ಹಿಂಜರಿಯುವರು. ತಲೆಯೆತ್ತಿ ನಡೆಯುವುದು ಆತ್ಮವಿಶ್ವಾಸದ ಪ್ರತೀಕ.

■ ಸುಮಾ ರಮೇಶ್

# ಫೇಸ್ ವ್ಯಾಲ್ಯೂ

ಫೇಸ್ ವ್ಯಾಲ್ಯೂ ಅರ್ಥಾತ್ ಮುಖಬೆಲೆ ಎಂಬುದು ವಸ್ತುವಿಗಷ್ಟೇ ಅಲ್ಲದೆ ಮನುಷ್ಯರಿಗೂ ಅನ್ವಯಿಸುತ್ತದೆ. ಒಬ್ಬ ವ್ಯಕ್ತಿಯನ್ನು ನಾವು ಗುರುತಿಸುವುದು ಮುಖದ ಮುಖೇನ. ಪ್ರತಿಯೊಬ್ಬರ ಬೆರಳಚ್ಚು ಹೇಗೆ ವಿಭಿನ್ನವೋ ಹಾಗೆಯೇ ಮುಖವೂ ಭಿನ್ನ. ಹೀಗೆ ಕೋಟಿಗಟ್ಟಲೆ ವೈವಿಧ್ಯಮಯ ಚಹರೆಗಳನ್ನು ಸೃಷ್ಟಿಸಿದ ಸೃಷ್ಟಿಕರ್ತನ ಸೃಜನಶೀಲತೆಯನ್ನು ನಾವು ಮೆಚ್ಚಲೇಬೇಕು.

ಮುಖಕ್ಕೆ ಬೆಲೆ ಬರುವುದು ಅದನ್ನು ಹೊತ್ತ ಕಾಯದ ನಡತೆ, ಮಾಡುವ ಉತ್ತಮ ಕಾರ್ಯ, ಪ್ರತಿಭೆ, ಕೌಶಲ, ಆರ್ಥಿಕ ಸ್ಥಿತಿಗತಿಗಳಿಂದ. ಒಬ್ಬ ವ್ಯಕ್ತಿ ಎಷ್ಟು ಕೋಟಿಗಿದ್ದಾನೆ ಎಂಬುದರ ಮೇಲೆ ಅವನ ಸಾಮಾಜಿಕ ಗೌರವ ನಿರ್ಧಾರವಾಗುವುದೂ ಇದೆ. ಇದನ್ನೇ 'ಮುಖ ನೋಡಿ ಮಣೆ ಹಾಕುವುದು' ಎನ್ನುವುದು. ಕೆಲ ವರ್ಷಗಳ ಹಿಂದೆ ಕನ್ಯಾಪಿತೃಗಳು ವರಾನ್ವೇಷಣೆಗೆ ತೊಡಗಿದಾಗ ವರನ ಮುಖಬೆಲೆಯನ್ನು ಗಮನಿಸಿ ಮುಂದುವರಿಯುತ್ತಿದ್ದರು. 'ಫೇಸ್ ವ್ಯಾಲ್ಯೂ'ಗೆ ಅವನ 'ಪ್ಲೇಸ್ ವ್ಯಾಲ್ಯೂ' ಕೂಡ ಪೂರಕವಾಗಿರುತ್ತಿತ್ತು.

ಬಿಕರಿಗಿರಿಸಿದ ವಸ್ತುಗಳ ಬೆಲೆ ಶಾಪಿಂಗ್ ಮಾಲ್, ಶೋರೂಂ, ಪ್ರಾದೇಶಿಕ ಮಾರುಕಟ್ಟೆ, ಫುಟ್‌ಪಾತ್ ಹೀಗೆ ಅಲ್ಲಲ್ಲಿಯ ಅನುಕೂಲ–ಲಕ್ಷುರಿಗೆ ತಕ್ಕಂತೆ ಬದಲಾಗುವಂತೆ, ಅಂದು ವರನ ವಿದ್ಯೆ, ಹುದ್ದೆ, ಸ್ಥಾನಮಾನಕ್ಕೆ ತಕ್ಕಂತೆ ಮುಖಬೆಲೆಯೂ ಬದಲಾಗುತ್ತಿತ್ತು. ಇಂದಿನ ಹೆಣ್ಣುಮಕ್ಕಳು ಆ ಎಲ್ಲಾ ಹುದ್ದೆಗಳನ್ನು ಸ್ವತಃ ಅಲಂಕರಿಸಿ ಆರ್ಥಿಕವಾಗಿ, ಸಾಮಾಜಿಕವಾಗಿ ಸದೃಢ ವ್ಯಕ್ತಿತ್ವವನ್ನು ಹೊಂದಿ ಅವರ ಮುಖಬೆಲೆಯೇ ಗಗನಕ್ಕೇರಿದೆ. ಇದಲ್ಲದೆ ಫೇಸ್ ವ್ಯಾಲ್ಯೂ ಹೆಚ್ಚಿಸಿಕೊಳ್ಳಲು ಹಲವರು ಫೇಶಿಯಲ್, ಫೇಸ್‌ಪ್ಯಾಕ್, ಫೇಸ್‌ಪೀಲರ್‌ಗಳಿಗೂ ಮುಖವೊಡ್ಡುವುದಿದೆ.

ಕೃಷ್ಣದೇವರಾಯ ಒಮ್ಮೆ ತೆನಾಲಿ ರಾಮಕೃಷ್ಣನ ಮೇಲೆ ಕೋಪಗೊಂಡು ಮುಖ ತೋರಿಸಬೇಡ ಎಂದಾಗ ಅವನು ಮರುದಿನ ಮುಖಕ್ಕೊಂದು ಮಡಿಕೆ ಕವುಚಿಕೊಂಡು ಆಸ್ಥಾನಕ್ಕೆ ಬಂದು ಎಲ್ಲರಿಗೂ ಮನರಂಜನೆ ನೀಡಿದ್ದ. ವಯಸ್ಸು ಮಾಗಿದಂತೆ ಎಲ್ಲರ ಮುಖವನ್ನು ಅವುಚಿಕೊಳ್ಳುವ ಮಡಿಕೆ(ಸುಕ್ಕು)ಗಳನ್ನು ನಿವಾರಿಸಲು ನಿರಂತರ ಸರ್ಕಸ್ ನಡೆಯುತ್ತಲೇ ಇರುವುದು. ನಲವತ್ತರ ನಂತರ ತ್ವರಿತವಾಗಿ ಗುರುತ್ವಾಕರ್ಷಣೆಗೆ ಒಳಗಾಗುವ ತ್ವಚೆ ಯಾವ ಇಸ್ತ್ರಿಗೂ ಬಗ್ಗದೆ ಭೂಮಾತೆಯೆಡೆಗೆ ಬಾಗುತ್ತಾ ಹೋಗುವುದು.

ಇಂದು ರಸ್ತೆಗಳೆಲ್ಲಾ ಒನ್ ವೇ ಆಗಿ ಮುಖ ನೋಡಿ ಮಾತನಾಡುವವರ ಸಂಖ್ಯೆಗಿಂತಲೂ ಬೆನ್ನ ಹಿಂದೆ ಮಾತನಾಡುವವರ ಸಂಖ್ಯೆ ಹೆಚ್ಚಿದೆ. ಎರಡು ತಲೆಯ ಹಾವಿನಂತೆ ಎರಡು ಮುಖದ ವ್ಯಕ್ತಿತ್ವಗಳೂ ಅಲ್ಲಲ್ಲಿ ಕಾಣಸಿಗುತ್ತವೆ. ಭೌತಿಕವಾಗಿ ಒಬ್ಬ ವ್ಯಕ್ತಿಗೆ ಒಂದೇ ಮುಖವಿರಲು ಸಾಧ್ಯ. ಹೃದಯ, ಕಣ್ಣು, ಕೂದಲು, ಮೂತ್ರಪಿಂಡಗಳನ್ನು ಕಸಿ ಮಾಡಿದಂತೆ ತಲೆ, ಮುಖವನ್ನು ಕಸಿ ಮಾಡುವ ಟೆಕ್ನಾಲಜಿ ಇನ್ನೂ ಸೃಷ್ಟಿಯಾಗಿಲ್ಲ. ಫೇಸ್ ಇಂಪ್ಲಾಂಟೇಶನ್‌ನ ಏಕಮೇವ ಫಲಾನುಭವಿ ಎಂದರೆ ಅದು ನಮ್ಮ ಗಣಪ. ಹೀಗೆ ಪ್ರಾಣಿಯ ಮುಖವನ್ನು ದೇವರ ದೇಹಕ್ಕೆ ಕಸಿ ಮಾಡಿದ ಪ್ರಸಂಗವೇ ಮತ್ಸ್ಯಕನ್ಯೆಯ ಹುಟ್ಟಿಗೂ ಕಾರಣವಾಗಿರಬಹುದು. ಹೆಣ್ಣಿನ ಮುಖ ಹಾಗೂ ಮೀನಿನ ದೇಹದ ಮರ್ಮೇಡ್ ಯಾನೆ ಮತ್ಸ್ಯಕನ್ಯೆ ಎಂಬ ಪೌರಾಣಿಕ ಜಾನಪದ ಪಾತ್ರ ಬಾಲ್ಯದ ನಮ್ಮ ಮಾನಸ ಸರೋವರದಲ್ಲಿ ಚೆನ್ನಾಗಿ ಈಜಾಡಿತ್ತು.

ಬೆಳದಿಂಗಳು ಸೂಸುವಂತಹ ಮುಖದವರು ಕವಿಕಲ್ಪನೆಯಲ್ಲಿ ಚಂದ್ರಮುಖಿಗಳು. ಶಾರೀರಿಕ ಭಿನ್ನತೆ ಹಾಗೂ ವೈರುಧ್ಯದ ಮನೋಗತವನ್ನು ಹೊಂದಿದ ಮಂಗಳಮುಖಿಯರನ್ನು ಮಾನವೀಯ ದೃಷ್ಟಿಯಿಂದ ನೋಡುವ ಪ್ರಯತ್ನಗಳು ಇಂದು ಎಲ್ಲೆಡೆ ನಡೆಯುತ್ತಿವೆ.